**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

# ಸಿ.ಸಿ. ಸಂಖ್ಯೆಃ 785/2024

**ಸಾಕ್ಷಿಯನ್ನು ದಿಃ 25.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಚಂದ್ರ | ಸಿಡಬ್ಲ್ಯೂಃ 5 | ಪಿಡಬ್ಲ್ಯೂಃ 4 |
| ತಂದೆಯ ಹೆಸರು | ಕರಿಯಯ್ಯ | | |
| ವಯಸ್ಸು | 38 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಸೋಮನಹಳ್ಳಿ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಸಾಕ್ಷಿ ನಿಪಿ–2ರ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ19.05.2024ರಂದು ಹುಣಸೂರಿನ ಆಜಾದ್ ನಗರದಲ್ಲಿರುವ ಒಂದು ಮೀನಿನ ಅಂಗಡಿಯ ಮುಂದೆ ಮಾಡಿದ್ದೇನೆ. ಅಲ್ಲಿ ಗಲಾಟೆಯಾದ ಬಗ್ಗೆ ಮಹಜರಿಗೆ ಸಹಿ ಹಾಕಿದ್ದೇನೆ. ಮಹಜರಿಗೆ ಬರುವಂತೆ ಪೋಲಿಸರು ನನಗೆ ಹೇಳಿದ್ದರು. ಪೋಲಿಸರಿಗೆ ಸ್ಥಳವನ್ನು ತೋರಿಸಿದವರ ಹೆಸರು ನೆನಪಿಲ್ಲ. ನಿಪಿ–2ನ್ನು ಬೆಳಿಗ್ಗೆ 11 ರಿಂದ 11–45ರವರೆಗೆ ಮಾಡಲಾಗಿದೆ. ನನ್ನ ಜೊತೆ ಇನ್ನೊಬ್ಬರು ಸಹಿ ಮಾಡಿದರು. ಅವರ ಹೆಸರು ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಒಂದು ತಕ್ಕಡಿ ಬೊಟ್ಟು ಮತ್ತು 2ವರೆ ಅಡಿಯ ಉದ್ದದ ಕೋಲನ್ನು ಅಮಾನತ್ತುಪಡಿಸಿಕೊಂಡರು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ–1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ. ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಬಾವಚಿತ್ರವನ್ನು ಮಹಜರು ಸಮಯದಲ್ಲಿ ತೆಗೆಯಲಾಗಿದೆ. ಅದನ್ನು ನಿಪಿ–3 ಎಂದು ಗುರುತಿಸಲಾಯಿತು. ಮಹಜರಿನಲ್ಲಿ ಬರೆದ ವಿಷಯಗಳು ಗೊತ್ತಿದೆ. ಮಹಜರನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು**

**ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಘಟನಾ ಸ್ಥಳವನ್ನು ಮಹಜರು ಸಮಯದಲ್ಲಿ ಚಾಸಾ-2 ರವರು ಪೋಲಿಸರಿಗೆ ತೋರಿಸಿದ್ದಾರೆ ಎಂದರೆ ಸರಿ. ಮಹಜರು ಮಾಡಿದ ಸ್ಥಳ ಆಯಿಷಾ ಮೀನಿನ ಅಂಗಡಿಯ ಮುಂದೆ ಎಂದರೆ ಸರಿ. ಚಾಸಾ-6 ರವರು ಮಹಜರಿಗೆ ಸಹಿ ಹಾಕಿದ ಇನ್ನೊಬ್ಬ ವ್ಯಕ್ತಿ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿ ತರ ಪರ ಕು. ASM ವಕೀಲರಿಂದಃ**

ಪೋಲೀಸರು ಯಾವ ಕಾರಣಕ್ಕಾಗಿ ನಿಮ್ಮನ್ನು ಕರೆದುಕೊಂಡು ಹೋದರು ಎಂದರೆ ಮಹಜರಿಗೆ ಸಹಿ ಹಾಕಲು ಕರೆಸಿದ್ದರು. ಸ್ಥಳದಲ್ಲಿ ಏನು ಘಟನೆ ನಡೆದಿತ್ತು ಎಂದು ನಿಮಗೆ ಗೊತ್ತಿತ್ತೇ ಎಂದರೆ ಮೀನಿನ ವಿಚಾರದಲ್ಲಿ ಗಲಾಟೆಯಾಗಿತ್ತು. ಅಲ್ಲಿ ಯಾರ್ಯಾರಿಗೆ ಗಲಾಟೆಯಾಗಿತ್ತು ಎಂದು ಗೊತ್ತಿಲ್ಲ. ನಾನು ಪೋಲೀಸ್ ಠಾಣೆಗೆ ಬೆಳಿಗ್ಗೆ 10.30ಕ್ಕೆ ಹೋಗಿದ್ದೆ. ಅಲ್ಲಿಂದ ಮಹಜರು ಸ್ಥಳಕ್ಕೆ ಬೆಳಿಗ್ಗೆ 11.00 ಗಂಟೆಗೆ ಹೋಗಿದ್ದೆ. ನಾನು ಬೇರೆ ವಿಚಾರಕ್ಕೆ ಪೋಲೀಸ್ ಠಾಣೆಗೆ ಹೋಗಿದ್ದಾಗ ಮಹಜರಿಗೆ ಬರುವಂತೆ ಪೋಲೀಸರು ಕರೆದಿದ್ದರು. ಮಹಜರು ಮಾಡಿದ ಸ್ಥಳದಲ್ಲಿರುವ ಅಂಗಡಿಯ ಹೆಸರು ಈಗ ನೆನಪಿಲ್ಲ. ಅದರ ಮಾಲೀಕರು ಯಾರು ಎಂದು ತಿಳಿದುಕೊಂಡಿಲ್ಲ. ಮಹಜರಿಗೆ ನನ್ನ ಜೊತೆ ಇನ್ನೊಬ್ಬರು ಸಹಿ ಹಾಕಿದ್ದು, ಅವರ ಹೆಸರು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ಮತ್ತು 2ನ್ನು ಈ ಹಿಂದೆ ನೋಡಿಲ್ಲ. ನನ್ನ ಸಮಕ್ಷಮ ಮು.ಮಾ.1 ಮತ್ತು 2ನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು) .

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.